**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯದಲ್ಲಿ, ಜೇವರಗಿ**

**ಕ್ರಿಮಿನಲ್ ಮೊಕದ್ದಮೆ ಸಂಖ್ಯೆಃ 172/2024**

**ಚಾ.ಸಾ- 3**

**ಪ್ರಾ.ಸಾ - 1**

**ಸಾಕ್ಷಿಗೆ ದಿನಾಂಕ 02-07-2026 ರಂದು ಪ್ರಮಾಣ ವಚನ ಬೋಧಿಸಲಾಯಿತು.**

| | | |
|---|---|---|
| ಸಾಕ್ಷಿಯ ಹೆಸರು | ಃ | ಹರೀಶ್ಚಂದ್ರ |
| ತಂದೆಯ ಹೆಸರು | ಃ | ಮರೆಪ್ಪ |
| ವಯಸ್ಸು | ಃ | 58 ವರ್ಷ |
| ಉದ್ಯೋಗ | ಃ | ಕೂಲಿ ಕೆಲಸ |
| ವಾಸಸ್ಥಳ | ಃ | ಜೇವರ್ಗಿ |

**ಮುಖ್ಯವಿಚಾರಣೆ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ**

ನ್ಯಾಯಾಲಯದ ಮುಂದಿರುವ ಆರೋಪಿ ನನಗೆ ಗೊತ್ತಿಲ್ಲ. ಚಾಸಾ-1 ಗೊತ್ತು. ಚಾಸಾ-2 ನನಗೆ ಗೊತ್ತಿಲ್ಲ.  ನನಗೆ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇಲ್ಲ. ಚಾಸಾ-1ರವರು ನನ್ನ ಹಾಗೂ ಚಾಸಾ-2ರವರ ಸಮಕ್ಷಮ ಯಾವುದೇ ಪಂಚನಾಮೆ ಮಾಡಿಲ್ಲ ವಸ್ತುಗಳನ್ನು ಜಪ್ತಿಪಡಿಸಿಕೊಂಡಿಲ್ಲ.

ಸಾಕ್ಷಿಗೆ ಜಪ್ತಿ ಪಂಚನಾಮೆಯನ್ನು ತೋರಿಸಲಾಗಿ ಅದರಲ್ಲಿ ಇದ್ದ ತನ್ನ ಸಹಿಯನ್ನು ನೋಡಿ ಗುರುತಿಸಿದ್ದರಿಂದ ಸದರಿ ಜಪ್ತಿ ಪಂಚನಾಮೆಯನ್ನು ನಿಪಿ-1 ಎಂದು ಸಾಕ್ಷಿ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು.  ಸದರಿ ಸಹಿಯನ್ನು ಪೊಲೀಸ್ ಠಾಣೆಯಲ್ಲಿ ಮಾಡಿರುತ್ತೇನೆ. ನಿಪಿ-1 ರಲ್ಲಿ ಬರೆದಿರುವ ವಿಚಾರ ಗೊತ್ತಿಲ್ಲ.

(ಮಾನ್ಯ ಸ.ಸ.ಅ ರವರು ಸಾಕ್ಷಿ ಪ್ರತಿಕೂಲವಾಗಿ ಸಾಕ್ಷಿ ನುಡಿದಿದ್ದಾರೆ ಹಾಗಾಗಿ ಅವರನ್ನು ಪ್ರತಿಕೂಲ ಸಾಕ್ಷಿ ಎಂದು ಘೋಷಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಬೇಕೆಂದು ಕೋರಿದ್ದು, ಮುಖ್ಯ ವಿಚಾರಣೆಯಲ್ಲಿ ಸಾಕ್ಷಿ ಅಭಿಯೋಜನೆಯ ಪ್ರಕರಣಕ್ಕೆ ವ್ಯತಿರೀಕ್ತವಾಗಿ ಸಾಕ್ಷ್ಯ ನುಡಿದಿರುವುದು ಮೇಲ್ನೋಟಕ್ಕೆ ಕಂಡುಬಂದಿರುವ ಕಾರಣ ಮಾನ್ಯ ಅಭಿಯೋಜನೆಯವರಿಗೆ ಪಾಟೀಸವಾಲು ಮಾಡಲು

ಅನುಮತಿಸಲಾಯಿತು)

**<u>ಪಾಟೀ ಸವಾಲುಃ ಮಾನ್ಯ ಸಹಾಯಕ ಸರಕಾರಿ ಅಭಿಯೋಜಕರವರಿಂದ</u>**

ದಿಃ 20-03-2024ರಂದು ಸಂಜೆ 5 ರಿಂದ 6 ಗಂಟೆ ಸಮಯದಲ್ಲಿ ಜೇವರ್ಗಿ ಪಟ್ಟಣದ ಕನಕದಾಸ್ ಚೌಕಿನ ಹತ್ತಿರ ನಿಮ್ಮ ಮತ್ತು ಚಾಸಾ-2ರವರ ಸಮಕ್ಷಮ ಸಮಕ್ಷಮ ನಿಪಿ-1 ರಂತೆ ಪಂಚನಾಮೆ ಮಾಡಿ 90 ಎಂ.ಎಲ್.ನ 42 ಓರಿಜಿನಲ್ ಚಾಯ್ಸ್ ವಿಸ್ಕಿಯ ಪೌಚುಗಳನ್ನು ಹಾಗೂ ರೂ.600/- ನಗದನ್ನು ಜಪ್ತಿ ಪಂಚನಾಮೆಮಾಡಿರುತ್ತಾರೆಂದರೆ ಸರಿಯಲ್ಲ. ಆರೋಪಿತಳು ಅಕ್ರಮವಾಗಿ ಮದ್ಯ ಮಾರಾಟ ಮಾಡುತ್ತಿರುವ ವಿಚಾರವಾಗಿ ಜಪ್ತಿಪಡಿಸಿಕೊಡಿರುತ್ತಾರೆ ಎಂದರೆ ಸರಿಯಲ್ಲ.

ನಿಮಗೆ ಪ್ರಕರಣದ ಬಗ್ಗೆ ಎಲ್ಲಾ ಮಾಹಿತಿ ಇದ್ದರೂ ಸಹ ಆರೋಪಿಗೆ ಸಹಾಯ ಮಾಡಲೆಂದು ಈ ರೀತಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಆರೋಪಿ ಪರ ವಕೀಲರಿಂದ ಪಾಟೀ ಸವಾಲು ಇರುವುದಿಲ್ಲ.**

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತುಲೇಖನಕ್ಕೆ ಬೆರಳಚ್ಚು ಮಾಡಲಾಯಿತು)
ಓ.ಹೇ.ಕೆ.ಸರಿ ಅದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ
ಪ್ರ.ದ.ನ್ಯಾ.ದಂಡಾಧಿಕಾರಿಗಳು ಜೇವರಗಿ